OS 157/2015 DW-5

ದಿನಾಂಕಃ **30-11-2024**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿ ವಾದಿ ಪರ ಶ್ರೀ ಡಿ ವಿ ಎಸ್ ವಕೀಲ ರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರ ವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿ ಸಹಿ ಮಾಡಿರುತ್ತೇನೆ.

ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಡಿ ಟಿ ವಕೀಲರಿಂದಃ

ದಾವಾ ಸ್ವತ್ತಿನಲ್ಲಿ ನಿಮಗೆ ವೈಯಕ್ತಿಕವಾದ ಹಕ್ಕು ಮತ್ತು ಮಾಲೀಕತ್ವ ಇರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಸರ್ವೇ ನಂ.59/4 ರಲ್ಲಿ ಖರಾಬಿನಲ್ಲಿ ನಮಗೆ ಹಕ್ಕು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಖರಾಬು ಸರ್ವೇ ನಂ.59/4 ಕ್ಕೆ ಹೊಂದಿಕೊಂಡಿರುವ ಮತ್ತು ಸರ್ವೇ ನಂ.59/4 ಕ್ಕೆ ಸೀಮಿತವಾಗಿರುವ ಖರಾಬು ಜಮೀನು ಅಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಖರಾಬು ಜಮೀನಿಗೆ ಪ್ರತ್ಯೇಕವಾದ ಸರ್ವೇ ನಂ. ನೀಡಿರುವುದಿಲ್ಲ , ಅದರೆ ಬಿ ಖರಾಬು ಎಂದು ನಮೂದು ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಬಿ ಖರಾಬು ಎಂದು ಸರ್ವೇ ನಂ.59/4 ರ ಆರ್ ಟಿ ಸಿ ಯಲ್ಲೆ ನಮೂದು ಮಾಡಿರುತ್ತಾರೆ ಎಂದರೆ ಸರಿ .

ನಾನು ಬಿ ಎಸ್ ಸಿ ಅಗ್ರಿಕಲ್ಚರ್ ಪದವೀಧರಳಾಗಿರುತ್ತೇನೆ ಎಂದರೆ ಸರಿ. ನಾನು ಜಿಲ್ಲಾ ಪಂಚಾಯ್ತಿಯ ಮಾಜಿ ಸದಸ್ಯಳಾಗಿರುತ್ತೇನೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಗೊಂದಿ ಹಳ್ಳಿ ಮತ್ತು ನರಸಾಪುರ ಗ್ರಾಮದಲ್ಲಿ ಜಮೀನುಗಳು ಇವೆ ಎಂದರೆ ಸರಿ. ನಮ್ಮ ಜಮೀನುಗಳ ಸರ್ವೇ ನಂ. ಗಳಿಗೆ ಸೇರಿದಂತಹ ಖರಾಬು ಜಮೀನು ಸದರಿ ಜಮೀನಿಗೆ ಮಾತ್ರ ಹೊಂದಿಕೊಂಡು ಅದಕ್ಕೆ ಸೇರಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ಖರಾಬು

ಸ್ವತ್ತಿನಲ್ಲಿ 30-40 ವರ್ಷಗಳಿಂದ ತಿಪ್ಪೆಗುಂಡಿಗಳನ್ನು ಹಾಕಿಕೊಂಡಿರುತ್ತಾರೆ , ದೇವಸ್ಥಾನ ಕಟ್ಟಿರುತ್ತಾರೆ , ಅರಳಿಕಟ್ಟೆ ಕಟ್ಟಿರುತ್ತಾರೆ. ಅವುಗಳನ್ನು ಕಟ್ಟುವಾಗ ವಾದಿಯ ಅಣ್ಣ ತಮ್ಮಂದಿರು ಸೇರಿಕೊಂಡಿರುತ್ತಾರೆ. ಅವರು ಯಾವುದೇ ಆಕ್ಷೇಪಣೆ ಮಾಡಿರುವುದಿಲ್ಲ ಮತ್ತು ಪಂಚಾಯ್ತಿ ಖಾತೆ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಖರಾಬು ಜಮೀನನ್ನು ಸರ್ಕಾರದಿಂದ ಭೂ-ಸ್ವಾಧೀನ ಪಡಿಸಿಕೊಂಡು ಪಂಚಾಯ್ತಿಗೆ ನೀಡಿರುವುದಿಲ್ಲ. ಸರ್ವೇ ನಂ.59/4 ಕ್ಕೆ ಹೊಂದಿಕೊಂಡಿರುವ ಖರಾಬು ಜಮೀನು ಗೊಂದಿ ಹಳ್ಳಿಯ ಮಧ್ಯ ಭಾಗದಲ್ಲಿ ಹರಿಜನ ಕಾಲೋನಿಗೆ ಹೊಂದಿಕೊಂಡು ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ಗೊಂದಿಹಳ್ಳಿಯ ಮಧ್ಯಭಾಗದಲ್ಲಿ ಇರುವುದಿಲ್ಲ , ಅದರೆ ಹರಿಜನ ಕಾಲೋನಿಗೆ ಹೊಂದಿಕೊಂಡು ಇರುತ್ತದೆ ಎಂದು ಉತ್ತರಿಸಿರುತ್ತಾರೆ.

ಖರಾಬು ಜಮೀನು ಗೊಂದಿಹಳ್ಳಿ ಬಸ್ ನಿಲ್ದಾಣನಿಂದ 200 ಮೀ ದೂರದಲ್ಲಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಸುಮಾರು 200 ಅಡಿ ದೂರದಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಸರ್ವೇ ನಂ.59/4 ರಲ್ಲಿನ ಜಮೀನು ವಾದಿ ಸಿದ್ದಪ್ಪನವರಿಗೆ ಸೇರಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಎಲ್ಲರಿಗೂ ಭಾಗ ಮಾಡಿಕೊಟ್ಟಿರುತ್ತಾರೆ. ಸಿದ್ದಪ್ಪ ಏನೂ ಇಟ್ಟು ಕೊಂಡಿಲ್ಲ ಎಂದು ಉತ್ತರಿಸಿರುತ್ತಾರೆ. ದೇವಸ್ಥಾನ , ತಿಪ್ಪೇಗುಂಡಿ ಮತ್ತು ಅರಳಿ ಕಟ್ಟೆ ಗ್ರಾಮಠಾಣಾ ಜಮೀನಿನಲ್ಲಿ ಇರುವುದಿಲ್ಲ. ಸರ್ವೇ ನಂ.59/4 ರಲ್ಲಿ ಇರುತ್ತದೆ. ಅದು ಬಿ ಖರಾಬಿನಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ.

ಸರ್ವೇ ನಂ.59/4 ರಲ್ಲಿ ಇರುವ ಖರಾಬು ಜಮೀನು ಯಾವುದೇ ಕಾಲದಲ್ಲೂ ಪಂಚಾಯ್ತಿಗೆ ಸೇರಿರುವುದಿಲ್ಲ , ವಾದಿಗೆ ಸೇರಿರುತ್ತದೆ ಎಂದು ಉತ್ತರಿಸಿರುತ್ತಾರೆ. ಖರಾಬು ಜಮೀನಿನ ಉತ್ತರ ಭಾಗದಲ್ಲಿ ಗ್ರಾಮ ಠಾಣಾ ಸ್ವತ್ತು ಇರುತ್ತದೆ ಎಂದರೆ ಸರಿ. ದೇವಸ್ಥಾನ

ಮತ್ತು ಅರಳಿ ಕಟ್ಟೆ ಖರಾಬು ಜಮೀನಿನ ಉತ್ತರ ದಿಕ್ಕಿನಲ್ಲಿರುವ ಗ್ರಾಮಠಾಣಾ ಸ್ವತ್ತಿನಲ್ಲಿ ಇರುತ್ತದ್ದೆ ಅಲ್ಲಿ ಯಾವುದೇ ತಿಪ್ಪೆಗುಂಡಿಗಳು ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2015 ರಲ್ಲಿ ನಾನು ಮತ್ತು ಇತರೆ ಪ್ರತಿವಾದಿಗಳು ದೇವಸ್ಥಾನ ಅರಳಿ ಕಟ್ಟೆ ಖರಾಬು ಜಮೀನುಗಳು ಇರುತ್ತವೆ ಎಂದು ವಾದಿಗಳ ವಿರುದ್ದ ಗಲಾಟೆ ಮಾಡಿರುತ್ತೀರಾ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಗಲಾಟೆಯಾದಾಗ ನಾನು ಇರಲಿಲ್ಲ , ನಂತರ ಸಮಾಧಾನ ಮಾಡಲು ಹೋದಾಗ ಅಲ್ಲಿ ಗಲಾಟೆಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಸರ್ವೇ ನಂ.59/4 ರಲ್ಲಿನ ಖರಾಬು ಜಮೀನು ಯಾವುದೇ ಕಾಲದಲ್ಲೂ ಪಂಚಾಯ್ತಿಗೆ ಅಥವಾ ಸಾರ್ವಜನಿಕರಿಗೆ ಸೇರದೇ ಇದ್ದರೂ ಸಹ ನಾನು 6 ಮತ್ತು 7 ನೇ ಪ್ರವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ,

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ